### ಹೋಗುವುದು ಹೀಗೆ

ನ್ಯೂಪೋರ್ಟ್ ನಗರಕ್ಕೆ ರಸ್ತೆಯ ಮೂಲಕ ನ್ಯೂಯಾರ್ಕಿನಿಂದ 150 ಮೈಲು ದೂರ, ಮೂರೂವರೆ ಗಂಟೆ ಪಯಣ. ಇಲ್ಲಿಗೆ ಬೋಸ್ಟನ್ 60 ಮೈಲು, ಫಿಲಡೆಲ್ಫಿಯಾ 225 ಮೈಲು, ಕೆನಡಾದಿಂದ 300 ಮೈಲು ದೂರದಲ್ಲಿವೆ. ಪ್ರಾವಿಡನ್ಸ್ ಏರ್‌ಪೋರ್ಟ್ ಸಮೀಪದ ವಿಮಾನ ನಿಲ್ದಾಣ.



ಅಮೆರಿಕದ ಅತಿ ಸಣ್ಣ ರಾಜ್ಯ 'ರೋಡ್ ಐಲ್ಯಾಂಡ್'. ವಿಶಾಲ ಬೀಚುಗಳು ಮತ್ತು ಒಳನಾಡಿನಲ್ಲೆಲ್ಲ ನುಸುಳಿದ ಅಟ್ಲಾಂಟಿಕ್ ಸಾಗರದಿಂದ ಈ ರಾಜ್ಯವನ್ನು 'ಓಶಿಯನ್ ಸ್ಟೇಟ್' ಎಂತಲೂ ಕರೆಯುವರು. ಈ ರಾಜ್ಯದ ಎರಡನೆಯ ಅತಿ ದೊಡ್ಡ ನಗರ ನ್ಯೂಪೋರ್ಟ್. ಇದು ಅರಮನೆಗಳಂತಹ ಅಗಾಧ ಬೇಸಿಗೆ ಭವನಗಳ ವಿಶಿಷ್ಟ ಮ್ಯಾನ್ಶನ್‌ಗಳಿಗೆ ಹೆಸರುವಾಸಿ.

ಜಾನ್ ಎಫ್. ಕೆನಡಿ ಅವರ ಮದುವೆಯ ರಿಸೆಪ್ಷನ್ ಇಲ್ಲಿನ ಮ್ಯಾನ್ಶನ್‌ವೊಂದರಲ್ಲಿ ನಡೆದಿತ್ತು. ಮೊತ್ತ ಮೊದಲ ಅಮೆರಿಕನ್ ಓಪನ್ ಟೆನ್ನಿಸ್ ಟೂರ್ನಮೆಂಟ್ ಇಲ್ಲಿಂದಲೇ ಪ್ರಾರಂಭವಾಗಿ, ಮುಂದೆ ನ್ಯೂಯಾರ್ಕಿಗೆ ಸ್ಥಳಾಂತರಗೊಂಡಿತು. ಟೆನಿಸ್‌ನ ಸುಪ್ರಸಿದ್ಧ 'ಹಾಲ್ ಆಫ್ ಫೇಮ್' ಸಂಸ್ಥೆ ಇರುವುದು ಇಲ್ಲಿಯೇ.

ನಾವಿರುವ ಕನೆಕ್ಟಿಕಟ್ ರಾಜ್ಯದ ರಾಜಧಾನಿ ಹಾರ್ಟ್‌ಫರ್ಡಿನಿಂದ ಬೆಳಿಗ್ಗೆ ಒಂಬತ್ತಕ್ಕೆ ರೋಡ್ ಐಲ್ಯಾಂಡಿನ ನ್ಯೂಪೋರ್ಟಿನತ್ತ ಕಾರಿನಲ್ಲಿ ಹೊರಟೆವು. ದಾರಿಯ ಇಕ್ಕೆಲಗಳಲ್ಲಿ ಬರೀ ಬೋಳು ಬೋಳು ಮರಗಳೇ. ಅಕ್ಟೋಬರ್‌ನಲ್ಲಿ ಇಡೀ ನ್ಯೂ ಇಂಗ್ಲಂಡ್ ಎಂಬ ಅಮೆರಿಕೆಯ ಪೂರ್ವೋತ್ತರ ರಾಜ್ಯಗಳನ್ನು ಸುತ್ತುತ್ತಿದ್ದಾಗ ಎಲ್ಲೆಲ್ಲಿಯೂ ಇಡೀ ನಿಸರ್ಗವೆಲ್ಲ ಶರದೃತುವಿನ (ಫಾಲ್) ಬಣ್ಣದ ಹೋಳಿಯಲ್ಲಿ ಮಿಂದೆದ್ದಿತ್ತು. ಈಗ ನೋಡಿದರೆ, ಎಲೆಗಳನ್ನೆಲ್ಲ ಉದುರಿಸಿದ ಪ್ರಕೃತಿಯು ಬರೀ ಬೆಂಗಾಡಾಗಿ ಪರಿವರ್ತಿತಗೊಂಡಿತ್ತು. ಮನುಷ್ಯನಿಗೂ ಕಷ್ಟ ಸುಖಗಳ ಚಕ್ರವು ಹಗಲು ರಾತ್ರಿಗಳಂತೆ ಹೀಗೆಯೇ ಬರುತ್ತದಲ್ಲವೇ ಎನ್ನಿಸಿತು. ಎರಡು ಗಂಟೆಯ ಪ್ರಯಾಣದಲ್ಲಿ ನ್ಯೂಪೋರ್ಟಿನಲ್ಲಿದ್ದೆವು.

### ದಿಢೀರ್ ಶ್ರೀಮಂತಿಕೆಯ ಫಲಶ್ರುತಿ

1860ರ ದಶಕದ ಅಮೆರಿಕದ ನಾಗರಿಕ ಯುದ್ಧದಿಂದ ಹಿಡಿದು 1910ರ ದಶಕದ ಮೊದಲ ವಿಶ್ವಯುದ್ಧದವರೆಗಿನ ಅವಧಿಗೆ 'ಥಳುಕಿನ ಕಾಲ' (Gilded Age) ಎನ್ನುವರು. ಈ ಕಾಲಘಟ್ಟದಲ್ಲಿ ಅಮೆರಿಕೆಯ ಬಂದರು ವ್ಯಾಪಾರ ವಹಿವಾಟು ವೃದ್ಧಿಯಾಯಿತು. ದಿಢೀರ್ ಶ್ರೀಮಂತಿಕೆಯು ಇವರ ಐಷಾರಾಮಿ ಜೀವನಕ್ಕೆ ಎಡೆಮಾಡಿಕೊಟ್ಟಿತು. ಅಂತಹುದರ ಫಲವೇ ಬೃಹತ್ ರೆಸಾರ್ಟುಗಳಂತಹ 'ಮ್ಯಾನ್ಶನ್ ಸಂಸ್ಕೃತಿ'ಗೆ ಕಾರಣವಾಯಿತು.

ಥಳುಕಿನ ಕಾಲಘಟ್ಟದಲ್ಲಿ ನ್ಯೂಯಾರ್ಕ್ ಮತ್ತು ಫಿಲಡೆಲ್ಫಿಯಾದ ಸಿರಿವಂತ ವರ್ಗಗಳು ಮತ್ತು ದಕ್ಷಿಣದ ಶ್ರೀಮಂತ ಪ್ಲಾಂಟರುಗಳು ಈ ಮ್ಯಾನ್ಶನ್‌ಗಳನ್ನು (ಮೊದಲು 'ಕಾಟೇಜಸ್' ಎಂದು ಕರೆಯಲಾಗುತ್ತಿತ್ತು) ಬೇಸಿಗೆಯ ವಾಸಕ್ಕಾಗಿ ನಿರ್ಮಿಸುವ ಪರಿಪಾಠವನ್ನು ಬೆಳೆಸಿಕೊಂಡರು. ಬೆಲೆವ್ ಅವೆನ್ಯೂ ರಸ್ತೆಯ ಇಕ್ಕೆಲಗಳಲ್ಲಿ ಹರಡಿಕೊಂಡ ಈ ಮಹಲುಗಳನ್ನು ನೋಡಲು ಸಾಗರ ದಂಡೆಯ ಗುಂಟ 'ಕ್ಲಿಫ್ ವಾಕ್' ಎಂಬ ಕಾಲ್ನಡಿಗೆಯ ದಾರಿಯೂ ಇದೆ. ಒಂದು ಗಂಟೆಯ ದಾರಿಯಲ್ಲಿ ನಡೆಯುತ್ತ ಇವುಗಳನ್ನೆಲ್ಲ ನೋಡುವುದೇ ಒಂದು ಸುಂದರ ಅನುಭವ.

ಸುವಿಶಾಲವಾಗಿ ಹರಡಿಕೊಂಡಿರುವ ದಿ ಬ್ರೇಕರ್ಸ್, ದಿ ಎಲ್ಮ್ಸ್, ಹಂಟರ್, ಚಟಾವ್–ಸುರ್–ಮೆರ್, ರೋಸ್ ಕ್ಲಿಫ್, ಮಾರ್ಬಲ್ ಹೌಸ್, ಕಿಂಗ್ಸ್ ಕೋಟ್, ಐಸಾಕ್ ಬೆಲ್ ಹೌಸ್, ಚೆಪ್ ಸ್ಟೋ ಮುಂತಾದ ಇನ್ನೂ ಅನೇಕ ದೊಡ್ಡ ಕ್ಯಾಸಲ್‌ಗಳಂತಹ ಬೃಹತ್ ಮಹಲುಗಳನ್ನು ಸಾರ್ವಜನಿಕರಿಗೆ ವೀಕ್ಷಣೆಗಾಗಿ ತೆರೆಯಲಾಗಿದೆ.

### ಪ್ರವಾಸಿಗರ ಚುಂಬಕಸ್ಥಳ

ರಮಣೀಯ ಬೀಚುಗಳು, ಸ್ವಾದಿಷ್ಟ ಸೀ ಫುಡ್ ರೆಸ್ಟೋರೆಂಟುಗಳು ಮತ್ತು 19ನೇ ಶತಮಾನದ ವಾಸ್ತುಶಿಲ್ಪ ಹೊಂದಿರುವ ಈ ಮ್ಯಾನ್ಶನ್‌ಗಳಿಂದ ಬೇಸಿಗೆಯಲ್ಲಿ ಪ್ರವಾಸಿಗರಿಗೆ ನ್ಯೂಪೋರ್ಟ್ ಬಲು ಹಾಟ್ ಸ್ಪಾಟ್ ಆಗಿ ಪರಿಣಮಿಸುತ್ತದೆ. ಆದುದರಿಂದ ಸಾಕಷ್ಟು ಮೊದಲೇ ವಸತಿ



ನ್ಯೂಪೋರ್ಟ್‌ನ ಪ್ರಸಿದ್ಧ ಮ್ಯಾನ್ಶನ್‌ಗಳಲ್ಲೊಂದಾದ 'ದಿ ಬ್ರೇಕರ್ಸ್'